ತೋಟಗಾರಿಕೆ ಇಲಾಖೆ,
ರಾಜ್ಯವಲಯ, ಚಿಕ್ಕಮಗಳೂರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯವಲಯ)
ಚಿಕ್ಕಮಗಳೂರು
ಜಿಲ್ಲೆ: ಚಿಕ್ಕಮಗಳೂರು

# ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 4(1)(ಬಿ) ಯ ಅಡಿಯಲ್ಲಿ ಪ್ರಕಟಿಸಲಾದ ಸ್ವ ಇಚ್ಛೆ ಪ್ರಕಟಣೆಯ ವಿವರಗಳು

# 2016-17

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
(ರಾಜ್ಯವಲಯ) ಚಿಕ್ಕಮಗಳೂರು.

# ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯವಲಯ) ಚಿಕ್ಕಮಗಳೂರು
# ಜಿಲ್ಲೆ: ಚಿಕ್ಕಮಗಳೂರು

**"ಸಾರ್ವಜನಿಕ ಮಾಹಿತಿಗೆ ಪ್ರಕಟಣೆ"**

**2016-17**

**ಮಾಹಿತಿ ಹಕ್ಕು ಅಧಿನಿಯಮ, 2005 ಪ್ರಕರಣ 4(1)(ಃ) ಅಡಿಯಲ್ಲಿ ಮಾಹಿತಿ ಪ್ರಕಟಣೆ**

## 1. ಸಾಮಾನ್ಯ ಮಾಹಿತಿ

ಚಿಕ್ಕಮಗಳೂರು ಜಿಲ್ಲೆಯು ನೈಸರ್ಗಿಕವಾಗಿ ಸಂಪದ್ಭರಿತ ಜಿಲ್ಲೆಯಾಗಿದ್ದು ಪ್ರಸಿದ್ದವಾದ ಪುಣ್ಯ ಕ್ಷೇತ್ರಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು ಕುದುರೆಮುಖ ಖನಿಜ ಸಂಪತ್ತು ಗಣಿಗಳನ್ನೊಳಗೊಂಡಿದೆ. ಈ ಜಿಲ್ಲೆಯ ಹೆಚ್ಚಿನ ವಿಸ್ತೀರ್ಣವು ಮಲೆನಾಡು ಪ್ರದೇಶಗಳನ್ನು ಒಳಗೊಂಡಿರುವುದರಿಂದ ಮಲೆನಾಡು ಜಿಲ್ಲೆಯೆಂದೇ ಪ್ರಸಿದ್ದಿಯಾಗಿದೆ. ಜಿಲ್ಲೆಯ ಕೇಂದ್ರ ಸ್ಥಾನವಾದ ಚಿಕ್ಕಮಗಳೂರು ರಾಜ್ಯದ ರಾಜಧಾನಿಯಿಂದ 251ಕಿಲೋ ಮೀಟರ್ ದೂರದಲ್ಲಿದೆ. ಚಿಕ್ಕಮಗಳೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಪಶ್ಚಿಮ ಭಾಗದಲ್ಲಿರುವ ಜಿಲ್ಲೆಯಾಗಿರುತ್ತದೆ. ಈ ಜಿಲ್ಲೆಯು 12.54 ರಿಂದ 13.54 ಉತ್ತರ ಅಕ್ಷಾಂಶ ಮತ್ತು 74.04 ರಿಂದ 72.22 ಪೂರ್ವ ರೇಖಾಂಶದವರೆಗು ಹಬ್ಬಿರುತ್ತದೆ. ಪೂರ್ವ, ಪಶ್ಚಿಮವಾಗಿ 136 ಕಿಲೋ ಮೀಟರ್ ಹಾಗು ಉತ್ತರ ದಕ್ಷಿಣವಾಗಿ 55.5 ಕಿಲೋ ಮೀಟರ್ ವರೆಗು ಆವೃತವಾಗಿದೆ. ಜಿಲ್ಲೆಯು ಪೂರ್ವದಲ್ಲಿ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದಲೂ, ಪಶ್ಚಿಮದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಂದಲೂ ಹಾಗು ಉತ್ತರ ಮತ್ತು ದಕ್ಷಿಣದಲ್ಲಿ ಕ್ರಮವಾಗಿ ಶಿವಮೊಗ್ಗ, ದಾವಣಗೆರೆ ಮತ್ತು ಹಾಸನ ಜಿಲ್ಲೆಗಳಿಂದಲೂ ಆವೃತಗೊಂಡಿರುತ್ತದೆ. ಈಲ್ಲೆಯ ಬಾಬಾಬುಡನ್‌ಗಿರಿ ದತ್ತಾತ್ರೇಯ ಬೆಟ್ಟದ ಪ್ರದೇಶವು ಸಮುದ್ರ ಮಟ್ಟಕ್ಕಿಂತ 1066.80 ಮೀಟರ್ ಗಳಿಂದ 1219.20 ಮೀಟರ್ ಎತ್ತರದಲ್ಲಿದೆ. ಆದರೆ ಪೂರ್ವ ಮೈದಾನ ಮತ್ತು ಪಶ್ಚಿಮ ಕಣಿವೆಗಳ ಇಳಿಜಾರು ಪ್ರದೇಶಗಳ ಎತ್ತರ ಸಮುದ್ರ ಮಟ್ಟಕ್ಕಿಂತ ಕೇವಲ 790 ಮೀಟರ್ ವರೆಗೆ ಇರುತ್ತದೆ. ಚಿಕ್ಕಮಗಳೂರು ಜಿಲ್ಲೆಯು ಒಟ್ಟು 7 ತಾಲ್ಲೂಕುಗಳನ್ನು ಒಳಗೊಂಡಿದ್ದು, ಇದರಲ್ಲಿ ತರೀಕೆರೆ, ಕಡೂರು ಮತ್ತು ಭಾಗಶಃ ಚಿಕ್ಕಮಗಳೂರು ಮೈದಾನ ಪ್ರದೇಶವಾಗಿರುತ್ತದೆ. ಉಳಿದ ತಾಲ್ಲೂಕುಗಳಾದ ಶೃಂಗೇರಿ, ನರಸಿಂಹರಾಜಪುರ, ಕೊಪ್ಪ, ಮೂಡಿಗೆರೆ ಹಾಗು ಭಾಗಶಃ ಚಿಕ್ಕಮಗಳೂರು ಮಲೆನಾಡು ಪ್ರದೇಶವಾಗಿರುತ್ತದೆ. ಚಿಕ್ಕಮಗಳೂರು ಜಿಲ್ಲೆ 34 ಹೋಬಳಿಗಳು, 226 ಗ್ರಾಮ ಪಂಚಾಯಿತಿಗಳು ಹಾಗು 1117 ಹಳ್ಳಿಗಳನ್ನು ಒಳಗೊಂಡಿರುತ್ತದೆ. 2001 ರ ಜನಗಣತಿಯ ಪ್ರಕಾರ ಜಿಲ್ಲೆಯು ಒಟ್ಟು 11,40,905 ಜನ ಸಂಖ್ಯೆ ಹೊಂದಿದ್ದು, ಪುರುಷರು 5,74,911(50.39%), ಮಹಿಳೆಯರು 5,65,994(49.6%), ಗ್ರಾಮೀಣ ಜನಸಂಖ್ಯೆ 9,18,181 (80.47%), ನಗರ ಜನಸಂಖ್ಯೆ 2,22,724 (19.52%) ಗಳಷ್ಟಿರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು 7201 ಚದರ ಮೀಟರ್ (722075 ಹೆಕ್ಟೇರ್) ಗಳಷ್ಟಿರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ 27.77 ಭಾಗ ಅಂದರೆ 200485 ಪ್ರದೇಶ ಅರಣ್ಯದಿಂದ ಕೂಡಿದೆ. ಜಿಲ್ಲೆಯಲ್ಲಿ ಬೇಸಾಯಕ್ಕೆ ಯೋಗ್ಯವಾದ ಜಮೀನು 3,31,401 ಹೆಕ್ಟೇರ್ ಗಳಷ್ಟಿರುತ್ತದೆ. ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು 1,12,928.80 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಉತ್ಪಾದನೆ 5,32,252 ಟನ್ ಗಳಷ್ಟಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 2,10,577 ಸಂಖ್ಯೆ ಭೂ ಹಿಡುವಳಿದಾರರು ಇದ್ದು, ಇದರಲ್ಲಿ ಅತಿಸಣ್ಣ ಭೂ ಹಿಡುವಳಿದಾರರು (1 ಹೆಕ್ಟೇರ್), 1,18,736 ಸಂಖ್ಯೆ, ಸಣ್ಣ ಭೂ ಹಿಡುವಳಿದಾರರು (1-2 ಹೆಕ್ಟೇರ್) 53800 ಸಂಖ್ಯೆ, ಅರೆ ಮಧ್ಯಮ ಭೂ ಹಿಡುವಳಿದಾರರು (2-4 ಹೆಕ್ಟೇರ್ 26065 ಸಂಖ್ಯೆ, ಮಧ್ಯಮ ಭೂ ಹಿಡುವಳಿದಾರರು (4-10 ಹೆಕ್ಟೇರ್) 9951 ಸಂಖ್ಯೆ, ದೊಡ್ಡ ಭೂ ಹಿಡುವಳಿದಾರರು (>10 ಹೆಕ್ಟೇರ್) 2025 ಸಂಖ್ಯೆಯಷ್ಟಿರುತ್ತಾರೆ.


KARNATAKA
Bidar
Gulbarga
Bijapur
Raichur
Bagalkot
Belgaum
Koppal
Dharwad
Gadag
Bellary
Uttara Kannada
Haveri
T - Tumkur
Davanagere
Shimoga
Chitradurga
Udupi
Chikmagalur
Tumkur
Kolar
Bangalore
Hassan
Mandya
Bangalore Rural
Mysore
Chamarajanagar
ಚಿಕ್ಕಮಗಳೂರು ಜಿಲ್ಲೆ
CHIKMAGALUR DISTRICT
ದಾವಣಗೆರೆ ಜಿಲ್ಲೆ
DAVANAGERE DIST.
ಶಿವಮೊಗ್ಗ ಜಿಲ್ಲೆ
SHIMOGA DIST.
ಚಿತ್ರದುರ್ಗ ಜಿಲ್ಲೆ
CHITRADURGA DIST.
ತರೀಕೆರೆ
TARIKERE
ನ.ರಾ. ಪುರ
N. R. PURA
ಉಡುಪಿ ಜಿಲ್ಲೆ
UDUPI DIST.
ಕೊಪ್ಪ
KOPPA
ಕಡೂರು
KADUR
ಶೃಂಗೇರಿ
SRINGERI
ಚಿಕ್ಕಮಗಳೂರು
CHIKMAGALUR
ತುಮಕೂರು ಜಿಲ್ಲೆ
TUMKUR DIST.
ಹಾಸನ ಜಿಲ್ಲೆ
HASSAN DIST.
ಮೂಡಿಗೆರೆ
MUDIGERE
ದಕ್ಷಿಣ ಕನ್ನಡ ಜಿಲ್ಲೆ
DAKSHINA KANNADA DIST.

ಜಿಲ್ಲೆಯು ಮಲೆನಾಡು ಮತ್ತು ಮೈದಾನ ತಾಲ್ಲೂಕುಗಳನ್ನು ಒಳಗೊಂಡಿದ್ದು, ಮಲೆನಾಡು ತಾಲ್ಲೂಕುಗಳಾದ ಶೃಂಗೇರಿ, ನರಸಿಂಹರಾಜಪುರ, ಕೊಪ್ಪ, ಮೂಡಿಗೆರೆ ಹಾಗೂ ಭಾಗಶಃ ಚಿಕ್ಕಮಗಳೂರಿನಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ. ಉಳಿದಂತೆ ಮೈದಾನ ತಾಲ್ಲೂಕುಗಳಾದ ತರೀಕೆರೆ, ಕಡೂರು ಹಾಗು ಭಾಗಶಃ ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಕಡಿಮೆ ಮಳೆಯಾಗುತ್ತದೆ. ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ 1886.4 ಮಿಲಿ ಮೀಟರ್ ಇರುತ್ತದೆ.

ಜಿಲ್ಲೆಯ ವಾತಾವರಣವು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪ್ರಫುಲ್ಲವಾಗಿರುತ್ತದೆ. ವಾತಾವರಣ ತೇವಾಂಶವು ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಾಗಿದ್ದು (80%), ಫೆಬ್ರವರಿ ತಿಂಗಳಲ್ಲಿ ಕಡಿಮೆ ಇರುತ್ತದೆ. ವಾತಾವರಣದಲ್ಲಿನ ತೇವಾಂಶ ಬೇಸಿಗೆ ತಿಂಗಳಲ್ಲಿ $35^0$ C ಇದ್ದರೆ ಚಳಿಗಾಲದ ತಿಂಗಳುಗಳಲ್ಲಿ $8^0$ C ನಿಂದ $10^0$ C ಇರುತ್ತದೆ.

ಈ ಜಿಲ್ಲೆಯು ಕೆಂಪು ಜೇಡು ಮೇಲ್ಮಣ್ಣನ್ನು ಹೊಂದಿದ್ದು, ಕಬ್ಬಿಣ ಮತ್ತು ಅಲ್ಯೂಮೀನಿಯಂ ಅತಿ ಹೆಚ್ಚಾಗಿ ಹೊಂದಿದೆ. ಮಣ್ಣಿನ ಕ್ಷಾರತೆ 5.5 ನಿಂದ 6 ರಷ್ಟಿರುತ್ತದೆ.

ಜಿಲ್ಲೆಯಲ್ಲಿ ತುಂಗಾ ಭದ್ರಾ, ಹೇಮಾವತಿ, ವೇದಾವತಿ, ನೇತ್ರಾವತಿ ಹಾಗೂ ಯಗಚಿ ನದಿಗಳು ಹರಿಯುತ್ತವೆ. ಜಿಲ್ಲೆಯಲ್ಲಿ ಕಾಲುವೆಗಳು. ಕೆರೆಗಳು, ಭಾವಿ, ಕೊಳವೆಭಾವಿ ಮತ್ತು ನದಿಗಳು ನೀರಾವರಿಯ ಮುಖ್ಯ ಮೂಲಗಳಾಗಿವೆ.

ಜಿಲ್ಲೆಯಲ್ಲಿ ಕಬ್ಬಿಣ, ಮ್ಯಾಗ್ನೇಸಿಯಂ ಅದಿರುಗಳು ಹೇರಳವಾಗಿ ದೊರೆಯುತ್ತಿದ್ದು, ಕುದುರೆಮುಖ ಪ್ರದೇಶವು ಕಬ್ಬಿಣದ ಅದಿರಿಗೆ ಪ್ರಖ್ಯಾತವಾಗಿವೆ. ಉಳಿದಂತೆ ಆಹಾರ ಪದಾರ್ಥಗಳ ತಯಾರಿಕೆ. ರಾಸಾಯನಿಕ ವಸ್ತುಗಳ ತಯಾರಿ, ರಬ್ಬರ್ ಉದ್ಯಮಗಳನ್ನು ಈ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ. ಕಾಫಿ ಉದ್ಯಮ ಅತ್ಯಂತ ಪ್ರಮುಖ ವಾಣಿಜ್ಯ ಉದ್ಯಮವಾಗಿದ್ದು ಈ ಜಿಲ್ಲೆಯಲ್ಲಿ ಒಟ್ಟು 85,465 ಹೆಕ್ಟೇರ್ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಆಧಾರಿತ ಉದ್ಯಮಗಳಾದ ಹಣ್ಣು ಮತ್ತು ತರಕಾರಿ ಸಂಸ್ಕರಣೆ, ವೆನಿಲ್ಲಾ ಸಂಸ್ಕರಣೆ, ಆಂಥೂರಿಯಂ ಬೇಸಾಯ, ಅಡಿಕೆ ಸಂಸ್ಕರಣೆ ಮುಂತಾದ ಉದ್ಯಮಗಳು ಹೆಚ್ಚಿನ ಮಹತ್ವ ಪಡೆದಿದೆ.

## ಜಿಲ್ಲೆಯ ವಿಶೇಷ ತೋಟಗಾರಿಕಾ ಬೆಳೆಗಳು

| ಬೆಳೆ | ತಳಿ |
|---|---|
| ಈರುಳ್ಳಿ | ಬಳ್ಳಾರಿ ರೆಡ್, ಲೋಕಲ್ |
| ಆಲೂಗಡ್ಡೆ | ಕುಫ್ರಿ ಜ್ಯೋತಿ, ಎ.ಟಿ.ಎಲ್-1, 2 |
| ಮಾವು | ಮಲ್ಲಿಕಾ, ಆಲಫಾನ್ಸೋ, ನೀಲಮ್ |
| ಸಪೋಟ | ಕಾಲಿಪತ್ತಿ, ಕ್ರಿಕೆಟ್ ಬಾಲ್ |
| ಬಾಳೆ | ಏಲಕ್ಕಿ ಬಾಳೆ, ಡ್ವಾರ್ಫ್ ಕ್ಯಾವೆಂಡಿಶ್, ರೊಬಸ್ಟಾ, ನೇನ್‌ದ್ರನ್, ಜಿ-9 |
| ತೆಂಗು | ತಿಪಟೂರ್ ಟಾಲ್, ಅರಸೀಕರೆ ಟಾಲ್ |
| ಅಡಿಕೆ | ತೀರ್ಥಹಳ್ಳಿ ಲೋಕಲ್ |
| ಕಾಳುಮೆಣಸು | ಪಣಿಯೂರ್-1,2, ಕರಿಮುಂಡಾ |
| ಏಲಕ್ಕಿ | ಮೂಡಿಗೆರೆ-1, ನೆಲ್ಯಾಣಿ ಗೋಲ್ಡ್ |
| ಶುಂಠಿ | ರಿಯೊ ಡಿ ಜನ್ಯೆರೊ, ಲೋಕಲ್ |
| ವಿಳ್ಯದೆಲೆ | ಮೈಸೂರ್ |
| ವೆನಿಲ್ಲಾ | ಲೋಕಲ್ |
| ಆಂಥೂರಿಯಂ | ಟ್ರಾಪಿಕಲ್ ರೆಡ್, ಡಚ್ ತಳಿಗಳು |
| ಚೆಂಡುಹೂವು | ಆಫ್ರಿಕನ್ ಹಳದಿ, ಜೈಂಟ್ ಡಬಲ್, ಲೋಕಲ್ |
| ಸೇವಂತಿಗೆ | ಎಲ್ಲೋ ಗೋಲ್ಡ್, ಇಂದಿರಾ ರವಿಕಿರಣ್. ಲೋಕಲ್, ರೆಡ್ ಗೋಲ್ಡ್ |

2. **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯ ವ್ಯಾಪ್ತಿಗೆ ಬರುವ ಕಛೇರಿಗಳು:**

| ಕ್ರ.ಸಂ. | **ಕಛೇರಿಯ ಹೆಸರು** | **ಕೇಂದ್ರಸ್ಥಾನ** |
|---|---|---|
| 1. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) | ಚಿಕ್ಕಮಗಳೂರು |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಬಿ. ಕಣಬೂರು ತೋಟಗಾರಿಕೆ ಕ್ಷೇತ್ರ | ಬಾಳೆಹೊನ್ನೂರು |
| 3. | ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಹರುವನಹಳ್ಳಿ ತೋಟಗಾರಿಕೆ ಕ್ಷೇತ್ರ. | ಕಡೂರು |
| 4. | ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಬೀಜುವಳ್ಳಿ/ಕಳಸ ತೋಟಗಾರಿಕೆ ಕ್ಷೇತ್ರ. | ಮೂಡಿಗೆರೆ |
| 5. | ಸಖರಾಯಪಟ್ಟಣ/ಬಾಕಿನಕೆರೆ ತೋಟಗಾರಿಕೆ ಕ್ಷೇತ್ರ | ಕಡೂರು |
| 6. | ಸಹಾಯಕ ತೋಟಗಾರಿಕೆ ಅಧಿಕಾರಿ (ರಾಜ್ಯವಲಯ) ಬೀಜುವಳ್ಳಿ | ಮೂಡಿಗೆರೆ |
| 7. | ಸಹಾಯಕ ತೋಟಗಾರಿಕೆ ಅಧಿಕಾರಿ (ರಾಜ್ಯವಲಯ) ಕಡೂರು | ಕಡೂರು |
| 8. | ಸಹಾಯಕ ತೋಟಗಾರಿಕೆ ಅಧಿಕಾರಿ (ರಾಜ್ಯವಲಯ) (ಸಸ್ಯ ಸಂರಕ್ಷಣೆ) ಕಡೂರು | ಕಡೂರು |
| 9. | ತೋಟಗಾರಿಕೆ ಸಹಾಯಕರು (ರಾಜ್ಯವಲಯ) ಬಾಳಗಡಿ ಬಿಂತರವಳ್ಳಿ ಕ್ಷೇತ್ರ – 1 ಸಂಖ್ಯೆ | ಕೊಪ್ಪ |
| 10. | ತೋಟಗಾರಿಕೆ ಸಹಾಯಕರು (ರಾಜ್ಯವಲಯ) ಬಿ. ಕಣಬೂರು ತೋಟಗಾರಿಕೆ ಕ್ಷೇತ್ರ – 1 ಸಂಖ್ಯೆ | ಬಾಳೆಹೊನ್ನೂರು |
| 11. | ತೋಟಗಾರಿಕೆ ಸಹಾಯಕರು (ರಾಜ್ಯವಲಯ) ಬೀಜುವಳ್ಳಿ/ಕಳಸ ತೋಟಗಾರಿಕೆ ಕ್ಷೇತ್ರ. – 3 ಸಂಖ್ಯೆ | ಮೂಡಿಗೆರೆ |
| 12. | ತೋಟಗಾರಿಕೆ ಸಹಾಯಕರು (ರಾಜ್ಯವಲಯ) ಹರುವನಹಳ್ಳಿ ತೋಟಗಾರಿಕೆ ಕ್ಷೇತ್ರ– 1 ಸಂಖ್ಯೆ | ಕಡೂರು |
| 13. | ತೋಟಗಾರಿಕೆ ಸಹಾಯಕರು (ರಾಜ್ಯವಲಯ) ಬ್ಯಾಗಡೇಹಳ್ಳಿ ತೋಟಗಾರಿಕೆ ಕ್ಷೇತ್ರ– 1 ಸಂಖ್ಯೆ | ಕಡೂರು |
| 14. | ತೋಟಗಾರಿಕೆ ಸಹಾಯಕರು, (ರಾಜ್ಯವಲಯ) ಬೇಲೇನಹಳ್ಳಿ ಕ್ಷೇತ್ರ–1 ಸಂಖ್ಯೆ | ತರೀಕೆರೆ |
| 15. | ಕಿರು ಪ್ರಯೋಗಾಲಯ ತರೀಕೆರೆ | ತರೀಕೆರೆ |

**ಜಿಲ್ಲೆಯಲ್ಲಿರುವ ತೋಟಗಾರಿಕಾ ಬೆಳೆಗಳ ವಿವರ:**

2008-09 ನೇ ಸಾಲಿನಲ್ಲಿ 1,12,928.80ಹೆಕ್ಟೇರ್ ತೋಟಗಾರಿಕಾ ಪ್ರದೇಶ ಇರುತ್ತದೆ. ಜಿಲ್ಲೆಯ ನಿವ್ವಳ ಬಿತ್ತನೆ ಪ್ರದೇಶ 3,46,770ಹೆ. ಇದ್ದು ಶೇ.32.56 ರಷ್ಟು ಪ್ರದೇಶವನ್ನು ತೋಟಗಾರಿಕಾ ಬೆಳೆ ಆಕ್ರಮಿಸಿಕೊಂಡಿರುತ್ತದೆ. ವಿವಿಧ ತೋಟಗಾರಿಕಾ ಬೆಳೆಗಳ ಅಡಿ ಇರುವ ಪ್ರದೇಶಗಳ ವಿವರ ಈ ಕೆಳಗಿನಂತಿರುತ್ತದೆ.

ಕಳೆದ ಸಾಲಿಗೆ ತೋಟಗಾರಿಕಾ ಬೆಳೆಗಳ ಉತ್ಪಾದನೆ ಸುಮಾರು 532252.25 ಟನ್‌ಗಳೆಂದು ಅಂದಾಜಿಸಲಾಗಿದ್ದು, ಉತ್ಪಾದಕತೆ 4.71ಟನ್ ಪ್ರತಿ ಹೆಕ್ಟೆರಿಗೆ ಅಂದಾಜಿಸಲಾಗಿದೆ. ತೋಟಗಾರಿಕಾ ಬೆಳೆಗಳ ಮೌಲ್ಯ ರೂ. 128820.29ಲಕ್ಷಗಳೆಂದು ಅಂದಾಜಿಸಲಾಗಿರುತ್ತದೆ.

| ಕ್ರ.ಸಂ | ಬೆಳೆಗಳು | ವಿಸ್ತೀರ್ಣ (ಹೆ.) | ಉತ್ಪನ (ಟನ್) | ಇಳುವರಿ (ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| ೧ | ಹಣ್ಣಿನ ಬೆಳೆಗಳು | 13037.60 | 263373.20 | 20.20 | 26201.14 |
| ೨ | ತರಕಾರಿ ಬೆಳೆಗಳು | 10947.90 | 177445.00 | 16.21 | 11906.82 |
| ೩ | ಸಾಂಬಾರು ಬೆಳೆಗಳು | 11893.00 | 26133.75 | 2.20 | 7476.44 |
| ೪ | ತೋಟದ ಬೆಳೆಗಳು | 76281.00 | 59998.70 | 0.79 | 82346.46 |
| ೫ | ವಾಣಿಜ್ಯ ಪುಷ್ಪಗಳು | 640.30 | 4977.60 | 7.77 | 845.73 |
| ೬ | ಔಷಧೀಯ ಸಸ್ಯಗಳು | 80.00 | 0.00 | 0.00 | 0.00 |
| ೭ | ಸುಗಂಧಿತ ಸಸ್ಯಗಳು | 49.00 | 324.00 | 6.61 | 43.70 |
| | ಒಟ್ಟು | **1,12,928.80** | **5,32,252.25** | **4.71** | **1,28,820.29** |

## ತಾಲ್ಲೂಕುವಾರು ತೋಟಗಾರಿಕೆ ಬೆಳೆಗಳ ಮಾಹಿತಿ

| ಕ್ರ.ಸಂ | ತಾಲೂಕು | ವಿಸ್ತೀರ್ಣ (ಹೆ.) | ಉತ್ಪಾದನೆ (ಟನ್) | ಇಳುವರಿ (ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| ೧. | ಚಿಕ್ಕಮಗಳೂರು | 13373.00 | 138361.00 | 10.35 | 15524.84 |
| ೨. | ಕಡೂರು | 51504.00 | 111081.70 | 2.16 | 56097.25 |
| ೩. | ಕೊಪ್ಪ | 9145.00 | 36117.00 | 3.95 | 11516.36 |
| ೪. | ಮೂಡಿಗೆರೆ | 8134.30 | 54981.65 | 6.76 | 8434.27 |
| ೫. | ತರೀಕೆರೆ | 20039.00 | 122178.70 | 6.10 | 24337.33 |
| ೬. | ನರಸಿಂಹರಾಜಪುರ | 5886.50 | 44432.00 | 7.55 | 6820.87 |
| ೭. | ಶೃಂಗೇರಿ | 4847.00 | 25100.20 | 5.18 | 6089.37 |
| ೮. | ಒಟ್ಟು | 112928.80 | 532252.25 | 4.71 | 128820.29 |

## ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿರುವ ತೋಟಗಾರಿಕೆ ಬೆಳೆಗಳ ವಿವರಗಳು:

1 ಚಿಕ್ಕಮಗಳೂರು : ತೆಂಗು, ಅಡಿಕೆ, ಬಾಳೆ, ಆಲೂಗಡ್ಡೆ, ತರಕಾರಿಗಳು ಹಾಗೂ ಹೂವುಗಳು ಮತ್ತು ಸಾಂಬಾರು ಬೆಳೆಗಳು

2. ಕಡೂರು : ತೆಂಗು, ಅಡಿಕೆ, ಬಾಳೆ ಹೂವುಗಳು ಹಾಗೂ ತರಕಾರಿಗಳು

3. ತರೀಕೆರೆ : ತೆಂಗು, ಅಡಿಕೆ, ಬಾಳೆ, ವೀಳ್ಯದೆಲೆ ಹಾಗೂ ತರಕಾರಿಗಳು

4. ಮೂಡಿಗೆರೆ : ಏಲಕ್ಕಿ, ಕಾಳುಮೆಣಸು, ಅಡಿಕೆ. ಕೊಕೊ, ಬಾಳೆ, ಕಿತ್ತಳೆ ಹಾಗೂ ಸಾಂಬಾರು ಬೆಳೆಗಳು

5. ಕೊಪ್ಪ : ಅಡಿಕೆ, ಕಾಳುಮೆಣಸು, ಕೊಕೊ ವಿಳ್ಳೇದೆ್ಲೆ ಹಾಗೂ ಸಾಂಬಾರು ಬೆಳೆಗಳು

6. ನರಸಿಂಹರಾಜಪುರ : ಏಲಕ್ಕಿ, ಕಾಳುಮೆಣಸು, ಅಡಿಕೆ. ಕೊಕೊ, ಬಾಳೆ, ಕಿತ್ತಳೆ ಹಾಗೂ ಸಾಂಬಾರು ಬೆಳೆಗಳು

7. ಶೃಂಗೇರಿ : ಅಡಿಕೆ. ಕೊಕೊ, ಬಾಳೆ, ಕಿತ್ತಳೆ, ವಿಳ್ಳೇದಲೆ, ಕಾಳುಮೆಣಸು ಹಾಗೂ ಇತರೆ ಸಾಂಬಾರು ಬೆಳೆಗಳು

## 4. ಜಿಲ್ಲೆಯಲ್ಲಿರುವ ರಾಜ್ಯವಲಯ ತೋಟಗಾರಿಕಾ ಕ್ಷೇತ್ರ/ ಸಸ್ಯಾಗಾರಗಳ ಮಾಹಿತಿ:

ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 9 ತೋಟಗಾರಿಕೆ ಕ್ಷೇತ್ರಗಳಿದ್ದು, ರಾಜ್ಯವಲಯ ತೋಟಗಾರಿಕೆ ಕ್ಷೇತ್ರಗಳು (ಒಟ್ಟು ವಿಸ್ತೀರ್ಣ 39.66 ಹೆಕ್ಟೇರ್) ಇರುತ್ತವೆ.

| ಕ್ರ. ಸಂ | ತೋಟಗಾರಿಕೆ ಕ್ಷೇತ್ರ/ ಸಸ್ಯಾಗಾರಗಳ ಹೆಸರುಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಹೆ.) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಹೆ.) | ಅಭಿವೃದ್ಧಿಪಡಿಸ ಬೇಕಾಗಿರುವ ವಿಸ್ತೀರ್ಣ (ಹೆ) | ಮೂಲಭೂತ ಸೌಕರ್ಯ | ಸಸ್ಯಸಂಪತ್ತಿನ ವಿವರ |
|---|---|---|---|---|---|---|

**ರಾಜ್ಯವಲಯ ತೋಟಗಾರಿಕೆ ಕ್ಷೇತ್ರಗಳು**

| ಕ್ರ. ಸಂ | ತೋಟಗಾರಿಕೆ ಕ್ಷೇತ್ರ/ ಸಸ್ಯಾಗಾರಗಳ ಹೆಸರು ಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಹೆ.) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಹೆ.) | ಅಭಿವೃದ್ಧಿಪಡಿಸ ಬೇಕಾಗಿರುವ ವಿಸ್ತೀರ್ಣ (ಹೆ) | ಮೂಲಭೂತ ಸೌಖರ್ಯ | ಸಸ್ಯಸಂಪತ್ತಿನ ವಿವರ |
|---|---|---|---|---|---|---|
| 1 | ಬಿ.ಕಣಬೂರು ತೋಟಗಾರಿಕೆ ಕ್ಷೇತ್ರ ಬಾಳೆಹೊನ್ನೂರು, ನರಸಿಂಹರಾಜಪುರ ತಾಲ್ಲೂಕು | 13.33 | 12.53 | 0.8 | ನೆರಳುಚಪ್ಪರಗಳು–೨ಸಂಖ್ಯೆ ಮಾವು ರ್‍ಯಾಪಿಡ್‌ತಾಕು ನೆರಳುಚಪ್ಪರ–1 ಸಂಖ್ಯೆ ಕೌವ್ ಗಾರ್ಡ್–1 | ತಾಳೆ–1045, |
| 2 | ಬಾಳಗಡಿ ತೋಟಗಾರಿಕೆ ಕ್ಷೇತ್ರ ಕೊಪ್ಪ ತಾಲ್ಲೂಕು | 2.04 | 1.6 | 0.44 | ಬೇಲಿ, ಕಛೇರಿ ಕಟ್ಟಡ, ರಿಂಗ್ ಬಾವಿ | ಮಾವು–150, ಗೇರು–50 |

| | | | | | | |
|---|---|---|---|---|---|---|
| 3 | ಬಿಂತ್ರವಳ್ಳಿ ತೋಟಗಾರಿಕೆ ಕ್ಷೇತ್ರ ಕೊಪ್ಪ ತಾಲ್ಲೂಕು | 0.896 | 0.8 | 0.09 | | |
| 4 | ಬೇಲೇನಹಳ್ಳಿ ತೋಟಗಾರಿಕೆ ಕ್ಷೇತ್ರ ತರೀಕೆರೆ | 4.16 | 4.16 | - | ತಂತಿಬೇಲಿ ಐ.ಪಿ.ಸೆಟ್ ಪಾಲಿಹೌಸ್,5ಎಕರೆಪೈಪ್ ಲೈನ್, ಬಿಲ್ಡಿಂಗ್ | ಮಾವು ದೊಡ್ಡಗಿಡಗಳು–108, ಸಣ್ಣಗಿಡಗಳು ಮಾವು–200, ಸಪೋಟ–50, ಅಡಿಕೆ–68, ತೆಂಗು–15 |
| 5 | ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರ ಮೂಡಿಗೆರೆ | 12.5 | 8 | 4.5 | ಕಾಂಪೌಂಡ್/ತಂತಿಬೇಲಿ ಕೊರಡಿ, ಮಂಚಗಳು ಕಛೇರಿಕಟ್ಟಡ, ಪಾಲಿಹೌಸ್, ಎಲ್.ಪಿ.ಜಿ.ಗ್ಯಾಸ್ ಸ್ಟೌವ್ ಮತ್ತು ಕನೆಕ್ಷನ್ ಸೋಲಾರ್‌ವಾಟರ್ ಹೀಟರ್ ತಂತಿಬೇಲಿ, ಕ್ಷೇತ್ರದಲ್ಲಿ ಪೈಪ್ ಲೈನ್, ಕಂಪ್ಯೂಟರ್‌ಮತ್ತು ಸಲಕರಣೆಗಳು, ತರಬೇತಿಕೇಂದ್ರದ ಕಲ್ಲು ಕಟ್ಟಡ ಎರೆಹುಳುಘಟಕ, ಹೋಂಡಪವರ್ ವೀಡರ್ ಗೋಡೌನ್ | ಸಪೋಟ–800, ತೆಂಗು–84, ಮಾವು–60, ಗೇರು–22. |
| 6 | ಹರುವನಹಳ್ಳಿ ತೋಟಗಾರಿಕೆ ಕ್ಷೇತ್ರ ಕಡೂರು | 2 | 2 | - | ತಂತಿಬೇಲಿ, ನೀರಾವರಿ ಸೌಕರ್ಯ | ಸಪೋಟ–125, ಮಾವು–85, ನೆಲ್ಲಿ–104 (ಹೊಸ ಗಿಡಗಳನ್ನು ನಾಟಿಮಾಡಲಾಗಿದೆ) |
| 7 | ಕಛೇರಿನರ್ಸರಿ ಕಡೂರು | 0.4 | 0.4 | - | ಬೋರ್‌ವೆಲ್, ತಂತಿಬೇಲಿ | ಮಾವು ರ್‍ಯಾಪಿಡ್‌ಪ್ಲಾಟ್–80 (ಹೊಸ ಗಿಡಗಳನ್ನು ನಾಟಿಮಾಡಲಾಗಿದೆ) |
| 8 | ಕಛೇರಿನರ್ಸರಿ ಚಿಕ್ಕಮಗಳೂರು | 0.6 | 0.6 | - | ಕಛೇರಿಕಾಂಪೌಂಡ್, ವಾಚ್‌ಮೆನ್‌ಶೆಡ್, ನೆರಳುಚಪ್ಪರ,ಎರೆಹುಳು ಘಟಕ | ತೆಂಗು –24 ಮರಗಳು |
| 9 | ಬ್ಯಾಗಡೇಹಳ್ಳಿ, ತೋಟಗಾರಿಕೆ ಕ್ಷೇತ್ರ, ಕಡೂರು | 3.74 | 3.6 | 0.144 | ಫಾರಂಹೌಸ್‌ಮತ್ತು ಸ್ಟೋರ್‌ರೂಂ, ನೀರಿನತೊಟ್ಟಿ ಮಿಸ್‌ಚೇಂಬರ್ಟ್, ಪಾಲಿಹೌಸ್ ಕೊಳವೆಬಾವಿ, ತಂತಿಬೇಲಿ ನೆರಳು ಚಪ್ಪರ | ಸಪೋಟ–360, ಮಾವು–630, ಸೀಬೆ–160 |

**5. ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು ರಾಜ್ಯವಲಯ ಚಿಕ್ಕಮಗಳೂರು, ಜಿಲ್ಲೆ ಕಛೇರಿಯ ಕಾರ್ಯಸಂಘಟನೆಯ ಪಟ್ಟಿ.**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**

**ತಾಂತ್ರಿಕ ಸಹಾಯಕರು** → **ತೋಟಗಾರಿಕೆ ಸಹಾಯಕರು** → **ತೋಟಗಾರರು**

**ಪ್ರಥಮ ದರ್ಜೆ ಸಹಾಯಕರು** → **ದ್ವಿತೀಯ ದರ್ಜೆ ಸಹಾಯಕರು** → **ಹಿರಿಯ ಬೆರಳಚ್ಚುಗಾರರು** → **ಹಿರಿಯ ವಾಹನ ಚಾಲಕರು**

**ಚಿಕ್ಕಮಗಳೂರು ಜಿಲ್ಲೆ ತೋಟಗಾರಿಕೆಯಲ್ಲಿನ ಖಾಲಿ ಹುದ್ದೆಗಳ ವಿವರ**

| ಕ್ರ.ಸಂ | ಪದನಾಮ | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿ ಇರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಹಿರಿಯ ಸಹಾಯಕತೋಟಗಾರಿಕೆ ನಿರ್ದೇಶಕರು | 28100-50100 | 1 | 1 | - |
| 2 | ಸಹಾಯಕ ತೋಟಗಾರಿಕೆ ನಿರ್ದೇಶಕರು | 24000-45300 | 4 | 2 | 2 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | 21600-40050 | 4 | 4 | - |
| 4 | ತೋಟಗಾರಿಕೆ ಸಹಾಯಕರು | 12500-24000 | 8 | 6 | 2 |
| 5 | ತೋಟಗಾರ | 9600-14550 | 4 | - | 4 |
| 6 | ಪ್ರಥಮ ದರ್ಜೆ ಸಹಾಯಕರು | 14550-26700 | 1 | 1 | - |
| 7 | ದ್ವಿತೀಯ ದರ್ಜೆ ಸಹಾಯಕರು | 11000-19000 | 1 | - | 1 |
| 8 | ಹಿರಿಯ ಬೆರಳಚ್ಚುಗಾರರು | 14550-26700 | 1 | 1 | - |
| 9 | ಹಿರಿಯ ವಾಹನ ಚಾಲಕರು | 14550-26700 | 1 | 1 | - |
| | **ಒಟ್ಟು** | | **25** | **16** | **9** |

6. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕುಗಳಿದ್ದು, ಹಿರಿಯ ಸಹಾಯಕ ತೊಟಗಾರಿಕೆ ನಿರ್ದೇಶಕರು ರಾಜ್ಯವಲಯ ಚಿಕ್ಕಮಗಳೂರು ರವರು ರಾಜ್ಯವಲಯ ಅಧೀನ ಬರುವ 7 ತೋಟಗಾರಿಕೆ ಕ್ಷೇತ್ರಗಳು ಮತ್ತು 2 ಕಛೇರಿ ನರ್ಸರಿಗಳನ್ನು ನಿರ್ವಹಿಸುತ್ತಾರೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯು ಈ ಮೇಲ್ಕಾಣಿಸಿದ ಎಲ್ಲಾ ಕಛೇರಿಗಳ ಮೇಲು ಉಸ್ತುವಾರಿ ನಡೆಸುತ್ತದೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಸದರಿ ಹುದ್ದೆ ಖಾಲಿ ಇದ್ದು ಸಹಾಯಕ ತೋಟಗಾರಿಕೆ ಅಧಿಕಾರಿ, ರವರು ಮೂಲ

ಹುದ್ದೆಯ ಜೊತೆಗೆ ಪ್ರಭಾರೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾಗಿರುತ್ತಾರೆ. ಒಬ್ಬ ಪ್ರಥಮ ದರ್ಜೆ ಸಹಾಯಕರು, ಒಬ್ಬ ಹಿರಿಯ ಬೆರಚ್ಚುಗಾರರು, ಮೂಲ ಹುದ್ದೆಯ ಜೊತೆಗೆ ದ್ವಿತೀಯ ದರ್ಜೆ ಸಹಾಯಕರಾಗಿರುತ್ತಾರೆ. ಜೊತೆಗೆ ಒಬ್ಬ ಹಿರಿಯ ವಾಹನ ಚಾಲಕರ ಹುದ್ದೆ ಇರುತ್ತದೆ.

ಹಿರಿಯ ಸಹಾಯಕ **ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ರವರು,** ಜಿಲ್ಲೆಯ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಅಭಿವೃದ್ಧಿ ಹಾಗೂ ಆಡಳಿತ ಕೆಲಸ ನಿರ್ವಹಿಸುವುದು, ಅಧಿಕಾರ ಮೀರಿದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

## 4 B (II) ಅಧಿಕಾರಿ/ ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು

| | |
|---|---|
| ಹಿರಿಯ ಸಹಾಯಕ **ತೋಟಗಾರಿಕೆ ನಿರ್ದೇಶಕರು** | ಜಿಲ್ಲೆಯ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಅಭಿವೃದ್ಧಿ ಹಾಗೂ ಆಡಳಿತ ಕೆಲಸ ನಿರ್ವಹಿಸುವುದು, ಅಧಿಕಾರ ಮೀರಿದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| ತಾ.ಸ.1: | ರಾಜ್ಯವಲಯ, ಕ್ಷೇತ್ರಗಳಿಗೆ ಸಂಬಂಧಿಸಿದ ಕಡತ ನಿರ್ವಹಣೆ, ತಾಲೂಕುವಾರು ಎಂ.ಎಂ.ಆರ್. ಸಿದ್ದಪಡಿಸುವುದು, ಎಲ್ಲಾ ಜಿಲ್ಲಾವಲಯ ಹಾಗೂ ರಾಜ್ಯವಲಯ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು ಹಾಗೂ ಇತರ ಸುತ್ತೋಲೆಗಳನ್ನು ತಾಲೂಕು ಅಧಿಕಾರಿಗಳಿಗೆ ರವಾನಿಸುವುದು, ಕಾರ್ಯಕ್ರಮ/ ಯೋಜನೆಗಳ ಅನುಷ್ಠಾನ ಕುರಿತು ಗಮನ ನೀಡುವುದು, ಯೋಜನೆ/ ಕರ್ಯಕ್ರಮಗಳ ವರದಿ ನೀಡುವುದು ಹಾಗೂ ತಾಂತ್ರಿಕ ಮಂಜೂರಾತಿ ಅಗತ್ಯವಿದ್ದಲ್ಲಿ ನೀಡುವುದು. ಜಿಲ್ಲಾವಲಯ, ರಾಜ್ಯವಲಯ, ಸೂಕ್ಷ್ಮ ನೀರಾವರಿ ಯೋಜನೆಗಳ ಡಿ.ಸಿ ಬಿಲ್ಲುಗಳ ತಾಂತ್ರಿಕ ಪರಿಶೀಲನೆ ಮಾಡಿ ಮೇಲು ಸಹಿಗೆ ಮಂಡಿಸುವುದು. ಪ್ರಗತಿ ವರದಿಗಳನ್ನು ತಾಲೂಕುಗಳಿಂದ ಸಂಗ್ರಹಿಸುವುದು, ಯೋಜನೆ/ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲಾ ವರದಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ವಿಧಾನಸಭೆ/ ಲೋಕಸಭೆ, ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ತಾಲೂಕುಗಳಿಂದ ಪಡೆಯುವುದು ಹಾಗೂ ಕ್ರೋಡಿಕೃತ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಜಿಲ್ಲಾ/ ತಾಲೂಕು ಪಂಚಾಯತ ಯೋಜನೆಗಳ ತಾಂತ್ರಿಕ ಮಂಜೂರಾತಿಯನ್ನು ಅಗತ್ಯವಿದ್ದಲ್ಲಿ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ತಾಲೂಕು ಅಧಿಕಾರಿಗಳ ತಾತ್ಕಾಲಿಕ ಪ್ರವಾಸ / ದಿನಚರಿ ಅನುಮೋದನೆ. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಜಿಲ್ಲಾ ಪಂಚಾಯತ ತೋಟಗಾರಿಕೆ ಕ್ಷೇತ್ರಗಳ ಫಸಲು ಹರಾಜು ಪ್ರಕ್ರಿಯೆ ಜವಾಬ್ದಾರಿ ವಹಿಸುವುದು ರಾಜ್ಯ ವಲಯ (ಕ್ಷೇತ್ರ/ ಸಸ್ಯಾಗಾರ) ಯೋಜನೆಗಳಿಗೆ ಸಂಬಂಧಿಸಿದ ಕಡತ ನಿರ್ವಹಣೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಳಿಗೆ ಸಂಬಂಧಿಸಿದ ಕಡತ ನಿರ್ವಹಣೆ. ಮೇಲಾಧಿಕಾರಿಗಳ ಆದೇಶ ಪಾಲಿಸುವುದು.. |
| **ಪ್ರ.ದ.ಸ.:** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿ ನಿಯಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು ನಗಧು ಹಾಗೂ ನಗದು ಪುಸ್ತಕಗಳ ನಿರ್ವಹಣೆ, ಜಿಲ್ಲಾವಲಯ, ರಾಜ್ಯವಲಯ ಹಾಗೂ ಇತರ ವಿಶೇಷ ಯೋಜನೆಗಳ ತಾಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಮಂಜೂರಾತಿ ಕ್ರಮವಹಿಸುವುದು, ಸದರಿ ಯೋಜನೆಗಳ ಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸುವುದು ಸರ್ಕಾರಿ ಆದೇಶ/ ಸುತ್ತೋಲೆಗಳ ಕಡತ ನಿರ್ವಹಣೆ, ಕಛೇರಿ ಆದೇಶ ಪುಸ್ತಕ ನಿರ್ವಹಣೆ ಅಧಿಕಾರಿ / ಸಿಬ್ಬಂಧಿಗಳ ರಜೆ, ವೇತನ ಬಡ್ತಿ, ಪಿಂಚಣಿ ಸೌಲಭ್ಯ ಇತ್ಯಾದಿ ಕಡತಗಳ ನಿರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

| | |
|---|---|
| **ಹಿರಿಯ ಬೆರಳಚ್ಚುಗಾರರು:** | ತಾಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಆದಾಯ ಮತ್ತು ಖರ್ಚಿನ ತ:ಖ್ತೆ ನಿರ್ವಹಣೆ ಹಾಗೂ ಜಿಲ್ಲಾ ಮಟ್ಟದ ಆದಾಯ ಮತ್ತು ಖರ್ಚಿನ ವರದಿ ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು ವಿವಿಧ ಜಿಲ್ಲಾವಲಯ ಹಾಗೂ ರಾಜ್ಯವಲಯ ಯೋಜನೆಗಳ ಅನುದಾನ ಬಿಡುಗಡೆ ಕ್ರಮ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.<br>ಪತ್ರಗಳನ್ನು ಸ್ವೀಕರಿಸಿದ್ದಕ್ಕೆ ನಮೂದಿಕರಣ, ಕಡತ ಟಪಾಲುಗಳನ್ನು ಶಾಖೆಯಲ್ಲಿ ಹಂಚುವುದು, ಕಡತಗಳ ರವಾನೆ, ಪ್ರತಿಗಳನ್ನು ಮಾಡುವುದು, ವೇತನ ಬಿಲ್ಲು, ಹಾಗೂ ಸಂಬಂಧಪಟ್ಟ ವಹಿಗಳ ನಿರ್ವಹಣೆ ಸ್ಟ್ಯಾಂಪ್ ವಹಿ ನಿರ್ವಹಣೆ, ಕಛೇರಿ ವಾಹನಕ್ಕೆ ಸಂಬಂಧಪಟ್ಟಂತೆ ಕಡತ ನಿರ್ವಹಣೆ, ಬಿಲ್ಲು ತಾಯಾರಿಕೆ ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.<br>ಶಾಖೆಗಳ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು, ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕವನ್ನು ನಿರ್ವಹಿಸುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

| | |
|---|---|
| **ಹಿರಿಯ –<br>ವಾಹನ ಚಾಲಕರು** | ಇಲಾಖೆಯ ವಾಹನವನ್ನು ವ್ಯವಸ್ಥಿತ ರೀತಿಯಲ್ಲಿ ಸುಸಜ್ಜಿತವಾಗಿ ಇರಿಸಿಕೊಳ್ಳುವುದು. ಇಲಾಖಾ ವಾಹನದ ಲಾಗ್‌ಬುಕ್ ನಿರ್ವಹಿಸುವುದು. ಇಲಾಖಾ ವಾಹನಕ್ಕೆ ಸಂಬಂಧಿಸಿದ ದುರಸ್ತಿ, ವಿಮಾ ಮರುನೊಂದಣಿ, ಅವಶ್ಯಕ ದೃಢೀಕರಣವನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯುವುದು, ವಾಹನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

**4 (b) III: - ನಿರ್ಣಯ ತೆಗೆದು ಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಮೇಲ್ವಿಚಾರಣೆ ಚಾನಲ್‌ಗಳು ಮತ್ತು ಅಕೌಂಟಬಿಲಿಟಿ ಸೇರಿದಂತೆ.**

**(The Procedure followed in the decision making prices including channels of supervision accountability)**

| | |
|---|---|
| **ಹಿ.ಸ.ತೋ.ನಿ.: (ರಾವ)** | ಪ್ರಸ್ತಾವನೆಗಳ ಕುರಿತು ತೆಗೆದುಕೊಳ್ಳುವ ಕ್ರಮದ ಬಗ್ಗೆ ತೀರ್ಮಾನಿಸುವುದು, ನಮ್ಮ ಹುದ್ದೆಗೆ ನೀಡಿದ ಅಧಿಕಾರ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು, ಅಗತ್ಯ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು. |
| **ತಾ.ಸ.1:** | ತಮ್ಮ ವ್ಯಾಪ್ತಿಗೆ ಸೇರಿದ ಇಲಾಖೆಯ ಎಲ್ಲಾ ಯೋಜನೆಗಳ ಕಡತಾ / ಕೆಲಸ ನಿರ್ವಹಣೆ, ವಿಧಾನಸಭೆ ಹಾಗೂ ಲೋಕಸಭೆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಅತ್ಯಂತ ತ್ವರಿತವಾಗಿ ಉತ್ತರಿಸುವುದು ಹಾಗೂ ಎಲ್ಲಾ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಡತಗಳನ್ನು ವಿಳಂಬ ಮಾಡದೇ ಮುಂದಿನ ಆದೇಶಕ್ಕಾಗಿ ಹಾಗೂ ಕ್ರಮಕ್ಕಾಗಿ ಮಂಡಿಸುವುದು. |
| **ವಿಷಯ ನಿರ್ವಾಹಕರು/ ಪ್ರ.ದ.ಸ.:** | ತಾವು ಸ್ವೀಕರಿಸಿದ ಪತ್ರಗಳ ಸಂಬಂಧ ನಿಯಮಗಳು, ಸರಕಾರಿ ಆದೇಶಗಳು, ಸುತ್ತೋಲೆಗಳು ಇತ್ಯಾದಿ ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು, ಬಿಲ್ಲುಗಳನ್ನು, ಆದೇಶಗಳನ್ನು, ನಗಧು ವಹಿಯನ್ನು ವಿಳಂಬ ಮಾಡದೇ ಮಂಡಿಸುವುದು. |
| **ಬೆರಳಚ್ಚುಗಾರರು:** | ಬೆರಳಚ್ಚು ಸಲುವಾಗಿ ನಿಡಿರುವ ಎಲ್ಲಾ ಪತ್ರಗಳನ್ನು ಸ್ಪುಟವಾಗಿ ಬೆರಳಚ್ಚು ಮಾಡಿ ತ್ವರಿತವಾಗಿ ಮಂಡಿಸುವುದು. ಮತ್ತು ದ್ವಿತಿಯ ದರ್ಜೆ ಸಹಾಯಕರ ಪ್ರಭಾರೆ ನಿರ್ವಹಿಸುವುದು. |

**4 : (IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಲಾದ ವಿದಾನಗಳು, ಕಟ್ಟುಪಾಡುಗಳು.**

| | |
|---|---|
| **ಹಿ.ಸ.ತೋ.ನಿ.:** | ಜಿಲ್ಲೆಯಲ್ಲಿ ತೋಟಗಾರಿಕೆ ಉಪನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ, ವಿಸ್ತರಣೆ ಹಾಗೂ ಆಡಳಿತ |

| | |
|---|---|
| **(ರಾವ)** | ನಿರ್ವಹಣೆ ಅಧೀನ ಅಧಿಕಾರಿ/ ಸಿಬ್ಬಂಧಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು. ಇಲಾಖೆಯ ಜಿಲ್ಲಾ ಉಸ್ತುವಾರಿ ಮಾಡುವುದು |
| **ತಾ.ಸ.1:** | ತಾಂತ್ರಿಕ ಸಹಾಯಕರು-೧ ವಿಭಾಗಕ್ಕೆ ಸಂಬಂಧಿಸಿದ ನಿಯಮಾನುಸಾರವಾಗಿ ಕಡತಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಕೇ.ಕ.ಸ./ ತೋ.ಉ.ನಿ. ರವರಿಗೆ ಮಂಡಿಸುವುದು. |
| **ಪ್ರ.ದ.ಸ.:** | ಹಂಚಿಕೆಯಾದ ವಿಷಯಗಳನ್ನು ಸಮರ್ಪಕವಾಗಿ ನಿಯಮಗಳ ಪ್ರಕಾರ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿಯ ನಿಯಮಾನುಸಾರ ಮುಂದಿನ ಆದೇಶ ಕೋರಿ ಕಡತ/ ಬಿಲ್ಲು/ ನಗಧು ವಹಿ ಮಂಡಿಸುವುದು. |
| **ಬೆರಳಚ್ಚುಗಾರರು:** | ಡಿ.ಸಿ. ಬಿಲ್ಲುಗಳ ನಿಯಮಾನುಸಾರ ಮಾಡುವುದು ಆದಾಯ ಮತ್ತು ಖರ್ಚಿನ ತ:ಖ್ತೆ ನಿರ್ವಹಣೆ ಹಾಗೂ ಜಿಲ್ಲಾ ಮಟ್ಟದ ಆದಾಯ ಮತ್ತು ಖರ್ಚಿನ ವರದಿ ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.<br>ಸಕಾಲದಲ್ಲಿ ಪತ್ರಗಳ ಸ್ವೀಕೃತಿ ಮತ್ತು ರವಾನೆಗೆ ಕ್ರಮ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.<br>ಕಛೇರಿಯ ಎಲ್ಲಾ ಬೆರಳಚ್ಚು ಕಾರ್ಯಗಳನ್ನು ದೋಷರಹಿತ ನಿರ್ವಹಿಸುವುದು, ಬೆರಳಚ್ಚು ಮಾಡಿದ ಪ್ರತಿಗಳನ್ನು ಲೆಕ್ಕ ಇಡುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು. |
| **ವಾಹನ ಚಾಲಕರು** | ವಹಿಸಲಾದ ಎಲ್ಲಾ ಕೆಲಸಗಳನ್ನು ವಿಳಂಬ ಮಾಡದೇ ಸಮರ್ಪಕವಾಗಿ ನಿರ್ವಹಿಸುವುದು. |

**(೪) (B) (V) ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ ಉಪಯೋಗಿಸುವ ನಿಯಂತ್ರಣದಲ್ಲಿಟ್ಟು ಕೊಂಡಿರುವ ನಿಯಮಗಳು/ಸೂಚನೆಗಳ ಕೈಪಿಡಿಗಳು/ದಾಖಲೆಗಳು ಮತ್ತು ನಿಬಂಧನೆಗಳು:**

**The rules regulation Instructions movements and records held by it or it control or used by its employees for discharging its functions)**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು.
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿ.ಸಿ.ಎ) ನಿಯಮಾವಳಿ.
3. ಕರ್ನಾಟಕ ಆರ್ಥಿಕ ಸಂವಿತೆ.
4. ಕಛೇರಿ ಕೈಪಿಡಿ.
5. ವೃಂದ ಮತ್ತು ನೇಮಕಾತಿ ನಿಯಮಗಳು.
6. ಅಯವ್ಯಯ ಕೈಪಿಡಿ.
7. ಕರ್ನಾಟಕ ಖಜಾನೆ ಸಂಹಿತೆ.
8. ಸಾದಿಲ್ವಾರು ವೆಚ್ಚ ಕೈಪಿಡಿ.
9. ಕರ್ನಾಟಕ ಪಾರದರ್ಶಕತೆ ಅಧಿನಿಯಮ-೧೯೯೯
10. ಕರ್ನಾಟಕ ಪಂಚಾಯತರಾಜ್ ಅಧಿನಿಯಮ-೧೯೯೩
11. ಮಾಹಿತಿ ಹಕ್ಕು ಅಧಿನಿಯಮ-೨೦೦೫
12. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಗಳು
13. ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು
14. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯ ಮಾರ್ಗಸೂಚಿಗಳು
15. ರಾಜ್ಯ ವಲಯ ಹಾಗೂ ಜಿಲ್ಲಾ ಪಂಚಾಯತ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು

16. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ
17. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಸಂಬಂಧಿಸಿದ ಮಾರ್ಗಸೂಚಿಗಳು
18. ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ್ ಮತ್ತು ವಿಶೇಷ ಡೆಲಿಗೇಷನ್ ಆಫ್ ಪವರ್ಸ್
19. ಸರಕಾರದ ಅಧಿಸೂಚನೆಗಳು (ಸುತ್ತೋಲೆಗಳು)
20. ಇಲಾಖೆಯಿಂದ ಹೊರಡಿಸಲಾದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು

1. ಸಾಮಾನ್ಯ ಸ್ವೀಕೃತಿ.
2. ನಮೂನೆ - ರವಾನೆ ರಿಜಿಸ್ಟರ್.
3. ನಮೂನೆ-ಎ ಮುದ್ದಾಂ ರಿಜಿಸ್ಟರ್.
4. ನಿಯಮ ೨೭ (ನಿಯಮ ೬೩) ಸ್ಟಾಂಪ್ ರಿಜಿಸ್ಟರ್.
5. ನಮೂನೆ-೬ (ನಿಯಮ ೩೮)ನಗದು ಪುಸ್ತಕ ರಿಜಿಸ್ಟರ್.
6. ಕ.ಅ.ಸ.ಪ್ರ ಪತ್ರ ೧ (ಅನುಚ್ಛೇದ-೬ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ)
7. ಕ.ಖ.ಸಂ ೬೫-ಎ ಬಿಲ್ಲು ಹಾಜರುಪಡಿಸುವ ಚೀಟಿ ರಿಜಿಸ್ಟರ್.
8. ಕ.ಆ.ಸಂ ನಮೂನೆ ೬೨-ಎ ಪರಿವರ್ತನೆಯ ಸಲುವಾಗಿ ಬಿಲ್‌ಗಳ ರಿಜಿಸ್ಟರ್.
9. ನಮೂನೆ ಸಂಖ್ಯೆ-೨೪ಎ ವೇತನ ಬಟವಾಡೆ ಪುಸ್ತಕ (ನಮೂನೆ ಸಂಖ್ಯೆ 24ಎ)
10. ಆಕಸ್ಮಿಕ ರಜಾ ವಹಿ.
11. ಹಿಸತೋನಿ ಕಛೇರಿ ಅಧಿಕಾರಿ/ ಸಿಬ್ಬಂದಿ ವರ್ಗದವರ ವೇತನ ಬಿಲ್ಲಿನಲ್ಲಿ ಕಡಿತಗೊಳ್ಳುವ ರಿಜಿಸ್ಟರ್ ಹಬ್ಬದ ಮುಂಗಡ
12. ಸಾ.ಭ.ನಿ,ಕೆ.ಜಿ.ಐ.ಡಿ, ಎಲ್.ಐ.ಸಿ, ವೃತ್ತಿ ತೆರಿಗೆ, ಜಿ.ಐ.
13. ಲೇಖನ ಸಾಮಗ್ರಿ ವಿತರಣಾ ರಿಜಿಸ್ಟರ್.
14. ದಿನವಹಿ ದಾಸ್ತಾನು ಪುಸ್ತಕ ರಿಜಿಸ್ಟರ್.
15. ತೋ.ಉ.ನಿ (ಜಿಪಂ) ಶಿರಸಿ ಕಛೇರಿಯ ಮಂಜೂರಾತಿ ಆದೇಶ ಪುಸ್ತಕ
16. ಈ ಕಛೇರಿಯ ಸಾಧಿಲ್ವಾರು ಪುಸ್ತಕ
17. ತಾಲೂಕು ಮಟ್ಟದ ಕಛೇರಿಗಳಿಗೆ ಮಂಜೂರಾತಿ ನೀಡುವ ವಹಿ.
18. ಡಿ.ಸಿ ಬಿಲ್ಲುಗಳನ್ನು ಮೇಲುಸಹಿ ಮಾಡುವ ವಹಿ.
19. ನಮೂನೆ ೨೪ ನಿಯಮ-೫೮ ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ-೨೪ (ನಿಯಮ-೫೮).
20. ಕ.ಅ.ಸಂ/೭೪ ರಲ್ಲಿ ನಿಗಧಿಪಡಿಸಿರುವ ನಮೂನೆ ಸರ್ಕಾರದ ಮೋಟಾರುವಾಹನದ ಲಾಗ್ ಪುಸ್ತಕ
21. ನಮೂನೆ ೨೪ ನಿಯಮ-೫೮ ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ-೨೪ (ನಿಯಮ-೫೮).
22. ಮಾಹೆವಾರು ಖರ್ಚಿನ ತಃಖ್ತೆಯ ರಿಜಿಸ್ಟರ್.
23. ಅಧಿಕಾರಿ/ ಸಿಬ್ಬಂದಿಗಳ ಹಾಜರಾತಿ ಪಟ್ಟಿ ರಿಜಿಸ್ಟರ್.
24. ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಡ್ರಾ ಮಾಡುವ ರಿಜಿಸ್ಟರ್.
25. ವಿದ್ಯುತ್ ಬಳಕೆ ವೆಚ್ಚದ ವಹಿ.
26. ವಿಷಯ ವಹಿ ರಿಜಿಸ್ಟರ್.
27. ಎನ್.ಡಿ.ಸಿ ಬಿಲ್ಲು ರಿಜಿಸ್ಟರ್.
28. ನಮೂನೆ-೧೪ ಅಂತಿಮ ವೇತನ ಪ್ರಮಾಣ ಪತ್ರ.

29. ಸಾದಿಲ್ವಾರು ಬಿಲ್ಲುಗಳ ವಿವರ
30. ಜೆರಾಕ್ಸ್ ಯಂತ್ರದ ರಿಜಿಸ್ಟರ್.
31. ಜೆರಾಕ್ಸ್ ಯಂತ್ರದ ರಿಜಿಸ್ಟರ್.
32. ಕಂಪ್ಯೂಟರ್ ರಿಜಿಸ್ಟರ್.
33. ನಮೂನೆ 34–ಎ ಪೀಠೋಪಕರಣ ವಹಿ.
34. ಬಿ–7 ನಗದು ರಶೀದಿ.
35. ಅಧಿಕಾರಿ/ ಸಿಬ್ಬಂದಿಯರ ಕಾರ್ಯನಿರ್ವಾಹಣ ವರದಿ ಪೈಲ್.
36. ಸಿಬ್ಬಂದಿಗಳ ಸೇವಾ ಪುಸ್ತಕ ರಿಜಿಸ್ಟರಗಳು.
37. 7–ಎ ದೂರವಾಣಿ ರಿಜಿಸ್ಟರ್.
38. ಶುದ್ದ ಪ್ರತಿ ವಹಿ.
39. ಭಾರತ ಸರ್ಕಾರ ಮಾಹಿತಿ ಹಕ್ಕು ನಿಯಮ–೨೦೦೫.
40. ಸರ್ಕಾರ ಸುತ್ತೋಲೆಗಳ ಪೈಲ್.
41. ಲೆಕ್ಕ ತಪಾಸಣೆ ಪೈಲ್.
42. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ  ನಗದು ಪುಸ್ತಕ ವಹಿ.
43. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ  ಡಿ.ಸಿ ಬಿಲ್ಲುಗಳ ರಿಜಿಸ್ಟರ್.
44. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ  ಚೆಕ್ ಗಳನ್ನು ವಿತರಿಸುವ ರಿಜಿಸ್ಟರ್.

## (4) (B) (VI) ಕಡತ ಶೀರ್ಷಿಕೆ

| ಕ್ರ.ಸಂ. | ಕಡತದ ಶಾಖೆ | | ದಾಖಲಾತಿಗಳ ನಿರ್ವಹಣೆ | ದಾಖಲಾತಿಗಳ ಉಲ್ಲೇಖ |
|---|---|---|---|---|
| 1. | ಸಿಬ್ಬಂದಿ | EST | ತೊಟಗಾರಿಕೆ ಇಲಾಖೆಯ ಸಿಬ್ಬಂಧಿ ಮತ್ತು ಅಧಿಕಾರಿಗಳ ಶಿಸ್ತು, ನಡತೆ ಮತ್ತು ಇತರೆ ವಿಷಯಗಳು | ಹಿಸತೋನಿ/ರಾವ/ಚಿ//ವಿನಿ1ಮತ್ತು ವಿನಿ2 |
| 2. | ಲೆಕ್ಕ ಶಾಖೆ | Accounts | ಲೆಕ್ಕ ಪತ್ರ ಹಾಗೂ ಲೆಕ್ಕ ಪತ್ರಗಳ ಪರಿಶೀಲನೆ ನಗದು ವಹಿ ನಿರ್ವಹಣೆ ಇತ್ಯಾದಿ | ಹಿಸತೋನಿ/ರಾವ/ಚಿ//ವಿನಿ1 |
| 3. | ಲೆಕ್ಕ ತಪಾಸಣೆ | Audit | ಮಹಾಲೇಖ ಪಾಲಕರ, ನಿರ್ದೇಶನಾಲಯ ಹಾಗೂ ಜಿಲ್ಲಾ ಪಂಚಾಯತ ಕಛೇರಿಗಳ ಲೆಕ್ಕ ತಪಾಸಣೆ ಪರಿಶೀಲನೆ ಹಾಗೂ ಅನುಸರಣಾ ಉತ್ತರ ನಿರ್ವಹಣೆ | ಹಿಸತೋನಿ/ರಾವ/ಚಿ//ವಿನಿ1 |
| 4. | ತಾಂತ್ರಿಕ ಸಹಾಯಕರು | TA | ತಾಂತ್ರಿಕ ವಿಭಾಗದ ಎಲ್ಲಾ ಕೆಲಸಗಳ ನಿರ್ವಹಣೆ, ವಿಶೇಷ ಯೋಜನೆಗಳಿಗೆ ತಾಂತ್ರಿಕ ಕಡತಗಳ ನಿರ್ವಹಣೆ | ಹಿಸತೋನಿ/ರಾವ/ಚಿ//ತಾಸ |

**(4) (B) (VII): ಪಾಲಿಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಇರುವ ಏರ್ಪಾಡುಗಳು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು.**

**(The particulars of any Arrangement that exists fir consultation with or representation by the member of the public in relation to the formulation of its policy or un-implementation thereto)**

ಇಲಾಖೆ ಮಾರ್ಗಸೂಚಿ/ ಎಂ.ಎಂ.ಆರ್. ಕಾರ್ಯಕ್ರಮಗಳು ಕರ್ನಾಟಕ ಸರ್ಕಾರದ ಆದೇಶಗಳ ಅಡಿಯಲ್ಲಿ ಯೋಜನೆಗಳ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಸಾರ್ವಜನಿಕ ಕುಂದುಕೊರತೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ನಿರ್ಧರಿಸಿ ಕ್ರಮ ಕೈಗೊಳ್ಳುವುದು.

**4 B (VIII) ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರ ಸಮಿತಿ ಅಥವಾ ಇತರ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸೇವೆ ಮತ್ತು ನಡವಳಿಗಳನ್ನು ಸಾರ್ವಜನಿಕರು ಆಕ್ಷೇಪಿಸಬಹುದೇ? ಅಥವಾ ಇಂತಹ ಸಭೆಗಳ ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ**

------ಹೌದು-----

4 (B) IX **ಹಿರಿಯ ಸಹಾಯಕ ತೋಟಗಾರಿಕೆ ನಿದೇಶಕರು (ರಾಜ್ಯವಲಯ) ಚಿಕ್ಕಮಗಳೂರು ಕಛೇರಿಯಲ್ಲಿ ಕಾರ್ಯ ನಿವಹಿಸುತ್ತಿರುವ ಅಧಿಕಾರಿ/ ನೌಕರರ ದೂರವಾಣಿ ವಿವರಗಳ ಪಟ್ಟಿ.**

| ಕ್ರ.ಸ0 | ಹುದ್ದೆ | ಹೆಸರು | ದೂರವಾಣಿ ಸ0ಖ್ಯೆ |
|---|---|---|---|
| 1. | ಹಿರಿಯ ಸಹಾಯಕ ತೋಟಗಾರಿಕೆ ನಿದೇಶಕರು | ಅಮೀನ್ ಅಹಮದ್ | 232858 |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀಮತಿ ದಿವ್ಯ, ಎನ್ | 232858 |
| 3. | ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಜಿ.ಎನ್. ನಟರಾಜ್ | 232858 |
| 4. | ಸಹಾಯಕ ತೋಟಗಾರಿಕೆ ಅಧಿಕಾರಿ | ಶ್ರೀ ಬಿಳಿಯಪ್ಪ | 232858 |
| 5. | ಪ್ರಥಮ ದರ್ಜೆ ಸಹಾಯಕರು | ಶ್ರೀ ನರಸಿಂಹ | 232858 |
| 6. | ಹಿರಿಯ ಬೆರಳಚ್ಚುಗಾರರು | ಶ್ರೀ ಜಿ.ಎಂ. ಪ್ರಭು | 232858 |
| 7. | ದ್ವಿತೀಯ ದರ್ಜೆ ಸಹಾಯಕ | ಖಾಲಿ ಹುದ್ದೆ | – |
| 8. | ಹಿರಿಯ ವಾಹನ ಚಾಲಕರು | ಶ್ರೀ ಎನ್.ಆರ್. ರಘುಪತಿ | 232858 |
| 9. | ತೋಟಗಾರಿಕೆ ಸಹಾಯಕರು | ಶ್ರೀಮತಿ ಉಷಾ | 232858 |
| 10. | ತೋಟಗಾರಿಕೆ ಸಹಾಯಕರು | ಶ್ರೀ ಡಿ.ಆರ್.ರಾಜಪ್ಪ | 232858 |
| 11. | ತೋಟಗಾರಿಕೆ ಸಹಾಯಕರು | ಸುಹೀಲ್ ಬಾಷ | 232858 |
| 12. | ತೋಟಗಾರರು | ಖಾಲಿ ಹುದ್ದೆ | - |

4 (B) X **ಹಿರಿಯ ಸಹಾಯಕ ತೋಟಗಾರಿಕೆ ನಿದೇಶಕರು (ರಾಜ್ಯವಲಯ) ಚಿಕ್ಕಮಗಳೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಮಾರ್ಚಿ-2017 ಮಾಹೆಯ ವೇತನದ ವಿವರ.**

| ಕ್ರ. ಸ | ಹುದ್ದೆ | ಹೆಸರು | ವೇತನ |
|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿದೇಶಕರು | ಅಮೀನ್ ಅಹಮದ್ | 46500/- |
| 2 | ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀಮತಿ ದಿವ್ಯ ಎನ್ | 27400/- |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ | ಶ್ರೀ ಬಿಳಿಯಪ್ಪ | 22800/- |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ | ಸೋಮಸುಂದರ | 22800/- |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ | ಅನ್ಸರ್ ಹುಸೇನ್ | 21600/- |
| 7 | ಪ್ರಥಮ ದರ್ಜೆ ಸಹಾಯಕರು | ಶ್ರೀ ನರಸಿಂಹ | 17200/- |
| 8 | ಹಿರಿಯ ಬೆರಳಚ್ಚುಗಾರರು | ಶ್ರೀ ಜಿ.ಎಂ. ಪ್ರಭು | 22200/- |
| 9 | ಹಿರಿಯ ವಾಹನ ಚಾಲಕರು | ಶ್ರೀ ಎನ್.ಆರ್. ರಘುಪತಿ | 21000/- |
| 10 | ತೋಟಗಾರಿಕೆ ಸಹಾಯಕರು | ಶ್ರೀಮತಿ ಉಷಾ | 13900 |
| 11 | ತೋಟಗಾರಿಕೆ ಸಹಾಯಕರು | ಶ್ರೀ ಡಿ.ಆರ್.ರಾಜಪ್ಪ | 14900/- |
| 12 | ತೋಟಗಾರಿಕೆ ಸಹಾಯಕರು | ಸುಹೀಲ್ ಬಾಷ | 13900/- |

## 4 B (XI) ಆಯವ್ಯಯ ವಿತರಣೆ 2016-17.

| ಕ್ರ.ಸಂ. | ಯೋಜನೆ/ ಯೋಜನೇತರ | ಭೌತಿಕ ಗುರಿ | ಆರ್ಥಿಕ ಗುರಿ (ರೂ ಲಕ್ಷಗಳಲ್ಲಿ) |
|---|---|---|---|
| **ರಾಜ್ಯವಲಯ ಯೋಜನೆಗಳು** | | | |
| 1 | ತೋಟಗಾರಿಕೆ ಬೆಳೆಗಳು ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ 2401-00-119-5-02 | 24.00 +1 | 6.50<br>6.49944 |
| 2 | ವಿಸ್ತರಣೆ ಮತ್ತು ತರಬೇತಿ 2401-00-800-2-27 | 25+1 | 12.87<br>12.84 |
| 3 | ಹಾರ್ಟಿ ಕ್ಲಿನಿಕ್ | 5.5 | |
| 4 | ಫಲಪುಷ್ಪ ಪ್ರದರ್ಶನ | 1 | |
| 5 | ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿ ನಿರ್ವಹಣೆ ಯೋಜನೆ | 40 | 14.00<br>13.99 |
| | | | |

# ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ರವರು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಯೋಜನೆಗಳ ವಿವಿರ

## ಜಿಲ್ಲೆಯಲ್ಲಿ 2016-17 ನೇ ಸಾಲಿಗೆ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಜಿಲ್ಲಾ ಪಂಚಾಯಿತಿ ಹಾಗೂ ರಾಜ್ಯ ವಲಯ ಯೋಜನೆಗಳ ಸಂಕ್ಷಿಪ್ತ ನೋಟ

| ಯೋಜನೆಗಳು | ವಿವರ |
|---|---|
| **ತೋಟಗಾರಿಕೆ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ** | ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣಕ್ಕಾಗಿ ಗೋನಿಯೋಜಸ್ ಪರೋಪಜೀವಿಯನ್ನು ಇಲಾಖೆಯ ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಿ ರೈತರಿಗೆ ವಿತರಿಸುವುದು ಹಾಗೂ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸುವುದು. |
| **ವಿಸ್ತರಣೆ ಮತ್ತು ತರಬೇತಿ ಯೋಜನೆ** | ರೈತ ಮಕ್ಕಳಿಗೆ ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ತೋಟಗಾರಿಕೆಯ ವಿಷಚುದಲ್ಲಿ 10 ತಿಂಗಳ ಸಮಗ್ರ ತರಬೇತಿ ನೀಡುವುದು. |
| **ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಯೋಜನೆ** | ಜಿಲ್ಲೆಯಲ್ಲಿನ ರಾಜ್ಯವಲಯ ವ್ಯಾಪ್ತಿಯ ಅಡಿಯಲ್ಲಿ ಬರುವ ಕ್ಷೇತ್ರಗಳನ್ನು ನಿರ್ವಹಣೆ ಮಾಡುವುದು, ಕಾವಲು ಇತರೆ ಕೆಲಸಗಳು |
| **ತೋಟಗಾರಿಕೆ ಮಾಹಿತಿ ಹಾಗೂ ಸಲಹಾ ಕೇಂದ್ರ ಹಾರ್ಟಿ ಕ್ಲಿನಿಕ್** | ತೋಟಗಾರಿಕೆಯಲ್ಲಿ ತೋಡಗಿಸಿಕೊಳ್ಳುತ್ತಿರುವ ರೈತರಿಗೆ ಖಚಿತ ಆದಾಯ ಒದಗಿಸುವ ಬೆಳೆಗಳ ಬಗ್ಗೆ ಮಾಹಿತಿ ಮತ್ತು ತೋಟಗಾರಿಕೆ ವಲಯದ ಅಭಿವೃದ್ಧಿಯಲ್ಲಿ ಪಾಲ್ಗೋಳ್ಳಲು ಸಲಹೆ ಮತ್ತು ಸಹಕಾರ ನೀಡುವುದು. |
| **KSHDA ಆವರ್ತ ನಿಧಿ ಯೋಜನೆ** | ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 16 ತೋಟಗಾರಿಕೆ ಕ್ಷೇತ್ರಗಳಿದ್ದು ಅವುಗಳಲ್ಲಿ 2014-15 ನೇ ಸಾಲಿಗೆ 2 ತೋಟಗಾರಿಕೆ ಕ್ಷೇತ್ರಗಳಾದ ಬಿ.ಕಣಬೂರು ತೋಟಗಾರಿಕೆ ಕ್ಷೇತ್ರ, ನರಸಿಂಹರಾಜಪುರ ತಾಲ್ಲೂಕು, ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರ ಮೂಡಿಗೆರೆ ತಾಲ್ಲೂಕು ಈ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ತೋಟಗಾರಿಕೆ ಕ್ಷೇತ್ರಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ ವಿವಿಧ ಬೆಳೆಗಳನ್ನು ಬೆಳೆಯುವ ಮೂಲಕ ತೋಟಗಾರಿಕೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. |

## 4 B (XII) ಸಹಾಯಧನದೊ0ದಿಗೆ ನಡೆಸುವ ಯೋಜನೆಗಳು ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮ0ಜೂರಾದ ಹಣ.

-ಯಾವುದೂ ಇರುವುದಿಲ್ಲ-

## 4 : (XIII) ಇಲಾಖೆಯಿಂದ ಅಥರೈಜೇಷನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್ಸ್‌ಗಳ ವಿವರಗಳು.

-ಯಾವುದೂ ಇರುವುದಿಲ್ಲ-

**4 B (XIV) ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿ ವಿವರ ದೊರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.**

-ಯಾವುದೂ ಇರುವುದಿಲ್ಲ-

**4 B (XV) ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶ ವಿಚಾರಗಳು ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆ?**

ಕಛೇರಿಯಲ್ಲಿ ಸಿಬ್ಬಂದಿಗಳಿಗೆ ಗ್ರಂಥಾಲಯ ಮತ್ತು ಓದುವ ಕೊಠಡಿಗಳ ಸೌಲಭ್ಯ ಕಲ್ಪಿಸಿಕೊಡಲಾಗಿದೆ

**4 B (XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೇ ವಿವರಗಳು**

**ಸಾರ್ವಜನಿಕ ಮಾಹಿತಿ ಅಧಿಕಾರಿ**

**ಶ್ರೀ ಅಮೀನ್ ಅಹಮದ್,**
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
ರಾಜ್ಯವಲಯ
ಚಿಕ್ಕಮಗಳೂರು
ದೂರವಾಣಿ ಸಂಖ್ಯೆ:08262– 232858

**ಮೇಲ್ಮನವಿ ಪ್ರಾಧಿಕಾರ**

**ಶ್ರೀಮತಿ ಪೂರ್ಣಿಮ ಜಿ.**
ತೋಟಗಾರಿಕೆ ಉಪನಿರ್ದೇಶಕರು
ಜಿಲ್ಲಾ ಪಂಚಾಯತ್
ಚಿಕ್ಕಮಗಳೂರು
ದೂರವಾಣಿ ಸ0ಖ್ಯೆ:08262– 235334

**4 B (XVII) ನಿಗಧಿಪಡಿಸಿದ ಇತರೇ ವಿಷಯಗಳು**

**-ಯಾವುದು ಇಲ್ಲ-**

ತೋಟಗಾರಿಕೆ ಇಲಾಖೆ,
ರಾಜ್ಯವಲಯ, ಚಿಕ್ಕಮಗಳೂರು.

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯವಲಯ)**
**ಚಿಕ್ಕಮಗಳೂರು**
**ಜಿಲ್ಲೆ: ಚಿಕ್ಕಮಗಳೂರು**

# ಮಾಹಿತಿ ಹಕ್ಕು ಅಧಿನಿಯಮ
# 2005 ಪ್ರಕರಣ 4(1)(ಎ)ಯ ಅಡಿಯಲ್ಲಿ
# ತಯಾರಿಸಲಾದ ವಿವರಗಳು

# 2016-17

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
(ರಾಜ್ಯವಲಯ) ಚಿಕ್ಕಮಗಳೂರು

ಸಂ/ಹಿಸತೋನಿ/ರಾವ/ಚಿ/ತಾಸ/16–17

ಹಿರಿಯ ಸಹಾಯಕ ತೋಟಗಾರಿಕೆ
ನಿರ್ದೇಶಕರವರ ಕಛೇರಿ, (ರಾಜ್ಯವಲಯ)
ಚಿಕ್ಕಮಗಳೂರು, ದಿನಾಂಕ 25–12–2017.

ಗೆ,

ಶ್ರೀ ಹೆಚ್.ಕೆ. ಅನಂತಮೂರ್ತಿ,
ಸಹಾಯಕ ತೋಟಗಾರಿಕೆ ನಿರ್ದೇಶಕರು,
ತರಬೇತಿ ಕೇಂದ್ರ,
ಲಾಲ್‌ಬಾಗ್, ಬೆಂಗಳೂರು–4

ಮಾನ್ಯರೆ,

ವಿಷಯ:– ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1) ಎ ಮತ್ತು 41(ಬಿ) ಅಡಿ ಸ್ವಯಂ ಪ್ರೇರಣೆಯಿಂದ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸುವ ಬಗ್ಗೆ. ಮತ್ತು 4(1)(ಎ) ಮತ್ತು 4(1)(ಬಿ)ರ ಅನುಷ್ಠಾನದ ವಿವರಗಳನ್ನು ವರದಿ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ:– ತೋಟಗಾರಿಕೆ ನಿರ್ದೇಶಕರು, (ಜಿಪಂ) ಚಿಕ್ಕಮಗಳೂರು, ರವರ ಪತ್ರದ ಸಂ/ ತೋಉನಿ/ಜಿಪಂಚಿ/ಕೆಕಸ/2014–15/491 ದಿನಾಂಕ 24–4–2015.

(())

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ 4(1) ಎ ಮತ್ತು 41(ಬಿ) ಗಳನ್ವಯ ಕಛೇರಿ ದಾಖಲಾತಿ/ಕಡತಗಳ ನಿರ್ವಹಣೆ ಮತ್ತು ಪ್ರಕಟಿಸಲಾದ ಸ್ವ–ಇಚ್ಛೆ ಪ್ರಕಟಣೆಯ ವಿವರಗಳನ್ನು ಕ್ರೋಢೀಕರಿಸಲು ಈ ಕಛೇರಿಯ ಎಲ್ಲಾ ಶಾಖೆಗಳಲ್ಲಿ ಲಭ್ಯವಿರುವ ಕಡತಗಳ ವಿವರಗಳನ್ನು ತಯಾರಿಸಿ Soft Copy ( C.D.) ಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,
–ಸಹಿ–
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ರಾಜ್ಯವಲಯ) ಚಿಕ್ಕಮಗಳೂರು ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿ.

<u>ಪ್ರತಿಯನ್ನು:–</u>

1) ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು–4, ರವರ ಅವಗಾಹನೆಗೆ ಸಲ್ಲಿಸಿದೆ.
3) ತೋಟಗಾರಿಕೆ ಉಪ ನಿರ್ದೇಶಕರು, (ಜಿಪಂ) ಚಿಕ್ಕಮಗಳೂರು, ರವರ ಅವಗಾಹನೆಗೆ ಸಲ್ಲಿಸಿದೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ರಾಜ್ಯವಲಯ) ಚಿಕ್ಕಮಗಳೂರು ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿ.